6

# ಸೇವಕ ನಾಯಕತ್ವ

ತನ್ನ ಸಭೆಯನ್ನು ನಡಿಸುವವರ ಬಗ್ಗೆ ಕ್ರಿಸ್ತನು ಕೇಳುವ ನಾಯಕತ್ವದ ಮಾದರಿಯು "ಸೇವಕತ್ವ ನಾಯಕತ್ವ"ವಾಗಿದೆ. ಯೇಸುವು ತನ್ನ ಶಿಷ್ಯರನ್ನು ಕರೆದು ಹೇಳಿದಂತೆ ಮತ್ತಾಯ 20:25-28ರಿಂದ ಇದು ದೃಢಪಡಿಸಲ್ಪಟ್ಟಿದೆ,

> ಜನಗಳನ್ನಾಳುವವರು ಅವರ ಮೇಲೆ ಅಹಂಕಾರದಿಂದ ದೊರೆತನಮಾಡುತ್ತಾರೆ, ಮತ್ತು ದೊಡ್ಡವರು ಬಲಾತ್ಕಾರದಿಂದ ಅಧಿಕಾರ ನಡಿಸುತ್ತಾರೆ ಎಂದು ನೀವು ಬಲ್ಲಿರಷ್ಟೆ. ನಿಮ್ಮಲ್ಲಿ ಹಾಗಿರಬಾರದು; ಆದರೆ ನಿಮ್ಮಲ್ಲಿ ದೊಡ್ಡವನಾಗಬೇಕೆಂದಿರುವವನು ನಿಮ್ಮ ಸೇವಕನಾಗಿರ ಬೇಕು; ನಿಮ್ಮಲ್ಲಿ ಮೊದಲನೆಯವನಾಗಬೇಕೆಂದಿರುವವನು ನಿಮ್ಮ ಆಳಾಗಿರಬೇಕು. ಹಾಗೆಯೇ ಮನುಷ್ಯ ಕುಮಾರನು ಸೇವೆ ಮಾಡಿಸಿಕೊಳ್ಳುವದಕ್ಕೆ ಬರಲಿಲ್ಲ, ಸೇವೆ ಮಾಡುವದಕ್ಕೂ ಅನೇಕರನ್ನು ಬಿಡಿಸಿಕೊಳ್ಳುವದಕ್ಕಾಗಿ ತನ್ನ ಪ್ರಾಣವನ್ನು ಈಡು ಕೊಡುವಕ್ಕೂ ಬಂದನು (NRSV).

"ಸೇವಕ ನಾಯಕತ್ವವನ್ನು" ಪರೀಕ್ಷಿಸೋಣ.

"ಸೇವಕ" ಮತ್ತು "ನಾಯಕ" ಎಂಬ ಎರಡು ಮಾತುಗಳು ವಿರುದ್ಧವಾದವುಗಳಂತೆ ತೋರುತ್ತವೆ. *ಒಬ್ಬ ಸಭಾನಾಯಕನು ಸೇವಕನಾಗಿರುವುದು ಸಾಧ್ಯವಾಗಿರುವುದೋ, ಇಲ್ಲವೇ ಒಬ್ಬ ಸಭಾ ನಾಯಕನು ಸೇವೆ ಮಾಡುವದರಿಂದ ನಡಿಸಬಹುದೋ?* ಅನುದಿನದ ಜೀವನದಿಂದ ಕೆಳಗಿನ ಉದಾಹರಣೆಗಳನ್ನು ಯೋಚಿಸಿರಿ:

*ತಂದೆ ತಾಯಿಗಳು ಮಕ್ಕಳಿಗೆ ಸೇವೆ ಮಾಡುವದರಿಂದ ನಡಿಸುತ್ತಾರೆ.* ಪ್ರೀತಿಯ ಮನೆಯಲ್ಲಿ ಹೊಸದಾಗಿ ಜನಿಸಿದ ಮಗಳ ಬಗ್ಗೆ ಯೋಚಿಸಿರಿ. ಆ ಮಗು ತನ್ನನ್ನು ತೋರಿಸಿ ಕೊಳ್ಳುವಾಗ, ಆ ದಂಪತಿಗಳಿಗಾಗಿ ಪ್ರತಿಯೊಂದನ್ನೂ ಬದಲಾಯಿಸುತ್ತದೆ. ಅವರ ದಿನಚರಿಗಳು ಭಿನ್ನವಾಗುತ್ತವೆ; ಅವರಿಗೆ ಹೊಸ ಪ್ರಾಧಾನ್ಯತೆಗಳಿರುತ್ತವೆ, ಹೊಸ ಆಸಕ್ತಿಗಳಿರುತ್ತವೆ, ತಮ್ಮ ಹಣವನ್ನು ಖರ್ಚುಮಾಡಲು ಹೊಸ ಮಾರ್ಗಗಳಿರುತ್ತವೆ. ಮಗುವು ಅಳುವಾಗ, ತಂದೆ ತಾಯಿಗಳು ಗಮನ ಕೊಡಲು ನಿಲ್ಲುವದಷ್ಟೇ ಅಲ್ಲ, ಏನಾದರೂ ತಪ್ಪಾಗಿದೆಯೋ ಎಂದು ನೋಡಲು ಓಡಿ ಹೋಗುತ್ತಾರೆ. ಹೊಸದಾದ ಮಗಳಿಂದ ಅತಿಯಾಗಿ ಮಿತಿಯುಳ್ಳ ರಾತ್ರಿಯಲ್ಲಿ ವ್ಯಕ್ತಪಡಿಸಲ್ಪಟ್ಟ ಅತೀ ಚಿಕ್ಕ ಅಗತ್ಯತೆಯೂ ಅದರ ತಂದೆ ತಾಯಿಗಳಿಂದ ಪೂರೈಸಲ್ಪಡುತ್ತದೆ. ಆ ಮನೆಯ ಮೇಲ್ವಿಚಾರಕರು ಯಾರು? ತಂದೆ ಮತ್ತು ತಾಯಿ ನಿಜವಾಗಿಯೂ ಮೇಲ್ವಿ ಚಾರಕರಾಗಿದ್ದಾರೆ. ಒಂದು ಕ್ರೈಸ್ತ ಮನೆಯಲ್ಲಿ, ಮಗುವು ತನ್ನ ತಂದೆ ತಾಯಿಗಳಿಗೆ ವಿಧೇಯ ರಾಗಬೇಕು ಎಂಬುದನ್ನು ಕಲಿಸಲ್ಪಡುತ್ತದೆ. ಇನ್ನೊಂದು ಉತ್ತರವೂ ಸಾಧ್ಯವಾಗುತ್ತದೆ: ಒಂದು ರೀತಿಯಲ್ಲಿ, ಮಗುವು ಮೇಲ್ವಿಚಾರಣೆಯಲ್ಲಿದೆ. ತಂದೆ ತಾಯಿಗಳ ಜಗತ್ತು ಅದರ ಸುತ್ತ ತಿರುಗುತ್ತದೆ. ಶಾಲೆಗೆ ಹೋಗುವದರ, ಪಿಯಾನೋ ಪಾಠಗಳ, ಲಿಟಲ್ ಲೀಗ್, PTA, ಸಂಡೇ ಸ್ಕೂಲ್, VBS, ಬೈಬಲ್ ಕ್ಯಾಂಪ್ ಇವುಗಳ ಸುತ್ತ ಮಗುವು ಕಾಲೇಜಿಗೆ ಹೋಗ ಲಿಕ್ಕಾಗುವಂತೆ ಇವೆಲ್ಲವುಗಳ ಮುಖಾಂತರ ತ್ಯಾಗ ಮಾಡಬೇಕಾಗುತ್ತದೆ. ತಂದೆ ತಾಯಿಗಳು ಮಗುವನ್ನು ನಡಿಸುತ್ತಾರೆ, ಆದರೆ ಅವರು ಮಗುವಿಗೆ ಸೇವೆ ಮಾಡುವದರಿಂದ ನಡಿಸುತ್ತಾರೆ.

*ಗಂಡಂದಿರು ತಮ್ಮ ಹೆಂಡತಿಯರಿಗೆ ಸೇವೆ ಮಾಡುವದರಿಂದ ನಡಿಸುತ್ತಾರೆ.* ಕ್ರೈಸ್ತ ಮನೆಯಲ್ಲಿ ಗಂಡನು "ಮೇಲ್ವಿಚಾರಕನಾಗಿದ್ದಾನೆ" ಗಂಡನು ಹೆಂಡತಿಯ ಶಿರಸ್ಸಾಗಿದ್ದಾನೆ

ಮತ್ತು ಹೆಂಡತಿಯು ತನ್ನ ಗಂಡನಿಗೆ ಅಧೀನಳಾಗಿರುತ್ತಾಳೆ (ಎಫೆಸ 5:22-24). ಒಬ್ಬ ಒಳ್ಳೆ ಕ್ರೈಸ್ತ ಗಂಡನಿಗಾಗಿ ನಾಯಕತ್ವವು ಏನನ್ನು ಒಳಗೊಂಡಿರುತ್ತದೆ? ಅವನು ದಿನಚರಿಯನ್ನು ಸಂಘಟಿಸುವನೋ, ತೀರ್ಮಾನಗಳನ್ನು ಮಾಡುವನೋ ಮತ್ತು ತನ್ನ ಸ್ವಂತ ಲಾಭಕ್ಕಾಗಿ ಮನೆಯನ್ನು ನಡಿಸುವನೋ? ಅವನು ತನ್ನ ಬಗ್ಗೆ ಮಾತ್ರವೇ ಸಂಪೂರ್ಣವಾಗಿ ಚಿಂತಿಸುವನೋ? ಅವನು ಹೆಂಡತಿಯ ಶಿರಸ್ಸಾಗಿದ್ದಾನೆಂದು ಹೇಳುವ ಪರಿಶುದ್ಧ ಬರಹವೇ ಅವನಿಗೆ ಅವನು ತನ್ನ ಹೆಂಡತಿಯನ್ನು ಕ್ರಿಸ್ತನು ಸಭೆಯನ್ನು ಪ್ರೀತಿಸಿದಂತೆ, ಅವನು ತನ್ನ ದೇಹವನ್ನು ಪ್ರೀತಿಸುವಂತೆ, ಮತ್ತು ತನ್ನನ್ನು ತಾನೇ ಪ್ರೀತಿಸಿಕೊಳ್ಳುವಂತೆ ಪ್ರೀತಿಸ ಬೇಕೆಂದು ಸೂಚಿಸುತ್ತದೆ (ಎಫೆಸ 5:25, 28, 33). ಅಂದರೆ ಅವನು ಮನೆಯನ್ನು ನಡಿಸುವಂತೆ ಆಕೆಯ ಅಪೇಕ್ಷೆಗಳನ್ನು ಮತ್ತು ಅಗತ್ಯತೆಗಳನ್ನು ತನ್ನವುಗಳಂತೆ ಮಹತ್ವವಾದವುಗಳನ್ನಾಗಿ ಯೋಚಿಸಬೇಕು, ಕ್ರಿಸ್ತನ ಉದಾಹರಣೆಯು ಅವನು ತನ್ನವುಗಳ ಮೊದಲು ಆಕೆಯ ಒಳ್ಳೆಯದನ್ನು ಮುಂದಿಡ ಬೇಕೆಂಬುದನ್ನು ಸೂಚಿಸುತ್ತದೆ, ಕ್ರೈಸ್ತ ಗಂಡನು ತನ್ನ ಹೆಂಡತಿಯ ಮೇಲೆ ಹೇಗೆ ಪರಿಣಾಮ ಮಾಡುತ್ತದೆಂಬುದನ್ನು ಯೋಚಿಸದೇ ಯಾವ ತೀರ್ಮಾನವನ್ನು ಮಾಡುವದಿಲ್ಲ. ಅವನು ತನ್ನ ಹೆಂಡತಿಯನ್ನು ಹೇಗೆ ನಡಿಸುವನು? ಅವನು ಸೇವೆ ಮಾಡುವದರಿಂದ ನಡಿಸುವನು!

*ಒಳ್ಳೆಯ ವ್ಯವಹಾರಸ್ಥರು ತಮ್ಮ ಕೆಲಸದವರ ಸೇವೆ ಮಾಡುವದರಿಂದ ನಡಿಸುವರು.* ಕೆಲಸದ ಸ್ಥಳದಲ್ಲಿ, ಯಜಮಾನನು, "ನಿಮಗೆ ಅತ್ಯುತ್ತಮವಾದದ್ದನ್ನು ಮಾಡಲು ಬಯಸುತ್ತೇನೆ" ಎಂದು ತನ್ನ ಅನುಯಾಯಿಗಳಿಗೆ ತಿಳಿಸಿದರೆ ಅವರು ತನಗೆ ಉತ್ತಮ ಕಾರ್ಯಮಾಡುವದನ್ನು ಹೊಂದಿಕೊಳ್ಳಬಹುದು. ನಾಯಕರು ಸೇವೆ ಮಾಡಿದರೆ, ಅವರು ಯಾರಿಗಾಗಿ ಸೇವೆ ಮಾಡುವರೋ ಅವರು ತಮಗೆ ಸೇವೆ ಮಾಡಲು ಸಿದ್ಧರಾಗಿರುವದನ್ನು ಮತ್ತು ಅವರ ನಾಯಕತ್ವವನ್ನು ಅನುಸರಿಸುವದನ್ನು ಕಂಡು ಕೊಳ್ಳುವರು.

## ಯೇಸುವಿಗೆ "ಸೇವಕ ನಾಯಕತ್ವದ" ಅಗತ್ಯತೆಯಿದೆಯೋ?

ನಾಯಕತ್ವದ ಬಗ್ಗೆ ಯೇಸುವು ಏನನ್ನು ಬೋಧಿಸಿದನು? ಆತನ ಶಿಷ್ಯರು ತಮ್ಮ ತಮ್ಮಲ್ಲಿಯೇ ರಾಜ್ಯದಲ್ಲಿ ಯಾರು ಹೆಚ್ಚಿನವರು ಎಂಬುದನ್ನು ಚರ್ಚಿಸಿದಾಗ, ಕನಿಷ್ಠ ಪಕ್ಷ ಮೂರು ಸಂದರ್ಭಗಳಲ್ಲಿ ಯೇಸುವಿನ ಉತ್ತರಗಳಿಂದ ಉತ್ತರವು ಸೂಚಿಸಲ್ಪಟ್ಟಿದೆ. ಪ್ರಶ್ನೆಯು ನಿರೀಕ್ಷಿಸಲ್ಪಟ್ಟಿತ್ತು, ಹನ್ನೆರಡು ಜನರು ತಾವು ನಾಯಕತ್ವಕ್ಕೆ ಯೋಗ್ಯರೆಂದು ಊಹಿಸಲ್ಪಟ್ಟಿದ್ದರು, ತಮ್ಮಲ್ಲಿ ಯಾರು ಅತೀ ದೊಡ್ಡವರು ಎಂಬುದರ ಬಗ್ಗೆ ಆಶ್ಚರ್ಯಪಡುವುದು ಸಹಜವಾಗಿತ್ತು.

### ಮತ್ತಾಯ 18:1-4

ಮೊದಲನೆಯ ಸಂದರ್ಭವು ಮತ್ತಾಯ 18:1-4ರಲ್ಲಿ ದಾಖಲೆಯಾಗಿದೆ (ಹೋಲಿಸು ಮಾರ್ಕ 9:33-37; ಲೂಕ 9:46-48). "ಆ ವೇಳೆಯಲ್ಲಿ ಶಿಷ್ಯರು ಯೇಸುವಿನ ಬಳಿಗೆ ಬಂದು - ಪರಲೋಕ ರಾಜ್ಯದಲ್ಲಿ ಯಾವನು ಹೆಚ್ಚಿನವನು? ಎಂದು ಕೇಳಿದರು" (ವಚನ 1). ಅವರ ಮುಂದೆ ಒಂದು ಚಿಕ್ಕ ಮಗುವನ್ನು ಅವರ ಮುಂದೆ ನಿಲ್ಲಿಸಿ ಯೇಸುವು ಉತ್ತರಕೊಟ್ಟನು. "ನೀವು ತಿರುಗಿಕೊಂಡು ಚಿಕ್ಕ ಮಕ್ಕಳಂತೆ ಆಗದೆ ಹೋದರೆ ನೀವು ಪರಲೋಕ ರಾಜ್ಯದಲ್ಲಿ ಸೇರಿರುವುದೇ ಇಲ್ಲ" ಎಂದು ಆತನು ಹೇಳಿದನು (ವಚನಗಳು 2, 3). ಆಮೇಲೆ, "ಹೀಗಿರುವದರಿಂದ ಯಾವನು ಈ ಚಿಕ್ಕ ಮಗುವಿನಂತೆ ತನ್ನನ್ನು ತಗ್ಗಿಸಿಕೊಳ್ಳುತ್ತಾನೋ ಅವನೇ ಪರಲೋಕ ರಾಜ್ಯದಲ್ಲಿ ಹೆಚ್ಚಿನವನು" ಎಂದು ಹೇಳಿದನು. ದೊಡ್ಡಸ್ತಿಕೆಯನ್ನು ಬಯಸುವದಕ್ಕಾಗಿ ಯೇಸುವು ಶಿಷ್ಯರನ್ನು ಗದರಿಸಲಿಲ್ಲ. ನಿಜವಾದ ದೊಡ್ಡಸ್ತಿಕೆಗೆ ಇನ್ನೊಂದು ಮಾರ್ಗವನ್ನು ಆತನು ತೋರಿಸಿದನು: ದೀನತೆಯ ಮಾರ್ಗ ಪರಲೋಕ ರಾಜ್ಯದಲ್ಲಿ ನಿಜವಾಗಿಯೂ ದೊಡ್ಡವರಾಗಿರಬೇಕೆಂದು ಬಯಸಿದರೆ, ಅವರು ದೀನರಾಗುವ ಅಗತ್ಯತೆಯಿದೆ.

ದೀನತೆಯು ದೀನ ಪಾತ್ರಗಳನ್ನು (ಚಿಕ್ಕಮಗುವಿನಂತ ಪಾತ್ರವನ್ನು) ಸ್ವೀಕರಿಸಲು

ಮನಸ್ಸುಳ್ಳವರಾಗಿರುವದನ್ನು ಕೇಳುತ್ತದೆ. ಫಿಲಿಪ್ಪಿ 2:3-8ರಲ್ಲಿಯ ಯೇಸುವಿನ ಉದಾಹರಣೆಯನ್ನು ಉಪಯೋಗಿಸುವಾಗ, ದೀನತೆಯು ಇತರರನ್ನು ಕುರಿತು ತನಗಿಂತ ಹೆಚ್ಚು ಉತ್ತಮವಾದವರೆಂದು, ತಿಳಿಯುವದನ್ನು, ಸೇವಕನು ಇಲ್ಲವೇ ದಾಸನು ಆಗಿರುವಂತೆ ವರ್ತಿಸುವದಕ್ಕಾಗಿ ಹಕ್ಕನ್ನು ಬಿಟ್ಟು ಕೊಡುವುದನ್ನು, ಮತ್ತು ವಿಧೇಯವಾಗುವದನ್ನು ಒಳಗೊಂಡಿರುತ್ತದೆ.

**ಮತ್ತಾಯ 20:20-28**

ಎರಡನೆಯ ಸಂದರ್ಭವು ಮತ್ತಾಯ 20:20-28ರಲ್ಲಿ ಕಂಡು ಬರುತ್ತದೆ (ಹೋಲಿಸು 10:35-45). ಘಟನೆಗಳ ಸರಣಿಯನ್ನು ಗಮನಿಸಿರಿ. ಯಾಕೋಬ ಮತ್ತು ಯೋಹಾನರ ತಾಯಿಯು ತನ್ನ ಮಕ್ಕಳಿಗಾಗಿ ವಿಶೇಷ ಸ್ಥಾನಕ್ಕಾಗಿ ಕೇಳಿ ಕೊಂಡಳು (ವಚನಗಳು 20, 21). ಅಂಥ ವಿಶೇಷ ಅವಕಾಶ ಕೊಡುವುದು ತನ್ನದಲ್ಲವೆಂದು ಯೇಸು ಉತ್ತರ ಕೊಟ್ಟನು (ವಚನಗಳು 22, 23). ಇತರ ಅಪೊಸ್ತಲರು ಈ ಇಬ್ಬರು ಸಹೋದರರ ಮೇಲೆ ಕೋಪ ಗೊಂಡರು (ವಚನ 24). *"ನಿಮ್ಮಲ್ಲಿ ಹಾಗಿರಬಾರದು ..."* ಎಂಬ ಬಲವಾದ ಮಾತುಗಳು ಯೇಸುವಿನಿಂದ ಬಂದವು (ವಚನಗಳು 25-28; ಒತ್ತಿ ಹೇಳಿದ್ದು ನನ್ನದು).

ಯೇಸುವಿನ ಮಾತುಗಳು ಯಾಕೋಬ ಮತ್ತು ಯೋಹಾನರಿಗೆ ಮಾತ್ರವೇ ಹೇಳಲ್ಪ ಡಲಿಲ್ಲ; ಅವು ಎಲ್ಲಾ ಅಪೊಸ್ತಲರಿಗಾಗಿಯೂ ಉದ್ದೇಶಿಸಲ್ಪಟ್ಟಿದ್ದವು. ಹತ್ತು ಜನ ಅಪೊಸ್ತಲರು ಸೇವೆ ಮಾಡುವದರ ಬಗ್ಗೆ ಮಾತ್ರವೇ ಸಂಬಂಧಿಸಿದ್ದರೆ, ಯಾಕೋಬನಾಗಲೀ ಯೋಹಾನ ನಾಗಲೀ ಯೇಸುವಿನ ಎಡಗಡೆಯಲ್ಲಿ ಇಲ್ಲವೇ ಬಲಗಡೆಯಲ್ಲಿ ಕುಳಿತಿದ್ದರೆ ಅವರಿಗೇ ನಾಗುತ್ತಿತ್ತು? ನಾವು ಮಾಡಬಹುದಾದ ಒಳ್ಳೇದನ್ನು ಮಾಡುವದರಲ್ಲಿ ಮಾತ್ರವೇ ನಾವು ಆಸಕ್ತರಾಗಿದ್ದರೆ; ಯಾರು ಮೇಲ್ವಿ ಚಾರಕರಾಗಿದ್ದಾರೆ ಇಲ್ಲವೇ ಯಾರಿಗೆ ಕೀರ್ತಿ ಹೋಗುತ್ತದೆ ಎಂಬುದರಲ್ಲಿ ಯಾವ ಭಿನ್ನತೆಯನ್ನು ಮಾಡುತ್ತದೆ? ತಮ್ಮ ಕೋಪದಿಂದ ಅಪೊಸ್ತಲರು ಯಾಕೋಬ ಮತ್ತು ಯೋಹಾನರಂತೆ ತಾವೂ ತಮಗೆ ಗೌರವದ ಸ್ಥಾನಗಳಿಗಾಗಿ ಆಶೆಪಟ್ಟರು ಎಂಬುದನ್ನು ಪ್ರದರ್ಶಿಸಿದರು.

ಮತ್ತಾಯ 20:25-28ರಲ್ಲಿ ತನ್ನ ಉತ್ತರದಿಂದ ಯೇಸುವು ಯಾವ ಪಾಠಗಳನ್ನು ಕಲಿಸಿದನು?

(1) *ಪರಲೋಕ ರಾಜ್ಯವು ಈ ಲೋಕದ ರಾಜ್ಯಕ್ಕಿಂತ ಭಿನ್ನವಾಗಿದೆ.* ಜಗತ್ತಿನಲ್ಲಿ, ಜನರು ಸ್ಥಾನಕ್ಕಾಗಿ ಹೋರಾಡುವರು, ಉನ್ನತ ಸ್ಥಾನಕ್ಕೆ ತಮ್ಮ ಹಸ್ತ ಚಾಚುವರು, ಗೌರವಕ್ಕಾಗಿಯೂ ಮಾನಕ್ಕಾಗಿಯೂ ಹುಡುಕುವರು, ಕಬ್ಬಿಣ ಹಸ್ತದಿಂದ ತಮ್ಮ ಪ್ರಜೆಗಳ ಮೇಲೆ ದೊರೆತನ ಮಾಡುವರು, ಮತ್ತು ತಮ್ಮ ಸಾಧನೆಗಳು ಕಡೆಗಣಿಸಲ್ಪಟ್ಟಾಗ ನೊಂದು ಕೊಳ್ಳುವರು. ಇನ್ನೊಂದೆಡೆಯಲ್ಲಿ, ದೇವರ ರಾಜ್ಯದಲ್ಲಿ, *"ಅದು ನಿಮ್ಮಲ್ಲಿ ಹಾಗಿರಬಾರದು!"* ಆ ಸಂದೇಶವು ನಮ್ಮ ಮನಸ್ಸುಗಳಲ್ಲಿ ಮತ್ತು ಹೃದಯಗಳಲ್ಲಿ ಆಳವಾಗಿ ಹೋದರೆ, ನಮ್ಮ ನಾಯಕತ್ವದ ಹೆಚ್ಚಾದ ಸಮಸ್ಯೆಗಳು ಇಲ್ಲವಾಗಿ ಹೋಗುವವು!

(2) *ದೇವರ ರಾಜ್ಯದಲ್ಲಿ ದೊಡ್ಡಸ್ತಿಕೆಗೆ ಮಾರ್ಗವು ಸೇವೆಯ ದಾರಿಯಾಗಿರುವುದು.* ದೊಡ್ಡಸ್ತಿಕೆಗಾಗಿ ಅಪೇಕ್ಷೆಯು ಗದರಿಸಲ್ಪಡಲಿಲ್ಲ; ಅದು ಕೇವಲ ಪುನಃ ನಿರ್ದೇಶಿಸಲ್ಪಟ್ಟಿದೆ. ನೀನು ಹೇಗೆ ದೊಡ್ಡವನಾಗಿರಬಹುದು? ಎಷ್ಟು ಜನರ ಸೇವೆ ಮಾಡಬಹುದು, ನೀನು ಎಷ್ಟು ಸೇವೆ ಮಾಡಬಹುದು, ಎಷ್ಟು ಚೆನ್ನಾಗಿ ನೀನು ಸೇವೆ ಮಾಡಬಹುದು ಎಂಬುದನ್ನು ನೋಡಿಕೋ! ಒಬ್ಬ ದಾಸನಾಗು!

(3) *ಯೇಸುವಿನ ಉದಾಹರಣೆಯು ಆತನ ಜನರ ಜೀವಿತಗಳಿಗೆ ಮಾರ್ಗದರ್ಶನ ಮಾಡಬೇಕು.* ಆತನು, "ಸೇವೆ ಮಾಡಿಸಿಕೊಳ್ಳುವದಕ್ಕೆ ಬರಲಿಲ್ಲ, ಸೇವೆ ಮಾಡುವದಕ್ಕೂ ಅನೇಕರನ್ನು ಬಿಡಿಸಿಕೊಳ್ಳುವದಕ್ಕಾಗಿ ತನ್ನ ಪ್ರಾಣವನ್ನು ಈಡು ಕೊಡುವದಕ್ಕೂ ಬಂದನು"

(ಮತ್ತಾಯ 20:28; ಮಾರ್ಕ 10:45). ನಾವು ನಮ್ಮ ಸುಖವನ್ನು ನೋಡಿಕೊಳ್ಳದೆ ಪ್ರತಿಯೊಬ್ಬನು ತನ್ನ ನೆರೆಯವನ ಸುಖವನ್ನು ನೋಡಿಕೊಳ್ಳಬೇಕು. ಯಾಕಂದರೆ ಕ್ರಿಸ್ತನು ಸಹ ತನ್ನ ಸುಖವನ್ನು ನೋಡಿಕೊಳ್ಳಲಿಲ್ಲ (ರೋಮಾಪುರ 15:1-3) ಎಂದು ನಮಗೆ ಹೇಳುವ ಪೌಲನ ಮಾತುಗಳು ಯೇಸುವಿನ ಸೇವಾ ಜೀವಿತವನ್ನು ಅರ್ಥಮಾಡಿಕೊಳ್ಳಲಿಕ್ಕೆ ಸಹಾಯ ಮಾಡುತ್ತವೆ. "ಆತನು ಐಶ್ವರ್ಯವಂತನಾಗಿದ್ದು ತಾನು ಬಡತನದಲ್ಲಿ ಸೇರುವದರಿಂದ ನೀವು ಐಶ್ವರ್ಯವಂತರಾಗಬೇಕೆಂದು ನಿಮಗೋಸ್ಕರ ಬಡವನಾದನು" (2 ಕೊರಿಂಥ 8:9) ಮತ್ತು "ಕ್ರಿಸ್ತನು ಸಭೆಯನ್ನು ಪ್ರೀತಿಸಿ ... ಅದನ್ನು ಪ್ರತಿಷ್ಠೆ ಪಡಿಸುವದಕ್ಕಾಗಿ ತನ್ನನ್ನು ಒಪ್ಪಿಸಿಕೊಟ್ಟನು" (ಎಫೆಸ 5:25) ಎಂದೂ ಸಹ ಪೌಲನು ಹೇಳಿದನು. ಹೀಗೆ ಕ್ರಿಸ್ತನು ಸೇವಕ ನಾಯಕತ್ವದ ದೊಡ್ಡ ಉದಾಹರಣೆಯನ್ನು ಮುಂದಿಟ್ಟಿದ್ದಾನೆ. ಕರ್ತನ ಸಭೆಯನ್ನು ನಡಿಸುವವನು ಸೇವೆ ಮಾಡಿಸಿಕೊಳ್ಳುವದನ್ನು ಹುಡುಕುವುದಕ್ಕಿಂತ ಹೆಚ್ಚಾಗಿ ಸೇವೆ ಮಾಡುವ ಮಾರ್ಗಗಳಿಗಾಗಿ ನೋಡತಕ್ಕದ್ದು. ತನ್ನನ್ನಲ್ಲ ಆದರೆ ಇತರರನ್ನು ಮೆಚ್ಚಿಸಲಿಕ್ಕೆ, ತನ್ನ ಸ್ವಂತ ಖರ್ಚಿನಿಂದ ಇತರರನ್ನು ಐಶ್ವರ್ಯವಂತರನ್ನಾಗಿ ಮಾಡಲು ಸಿದ್ಧನಾಗಿರುವದರಿಂದ; ಮತ್ತು ಇತರರಿಗೆ ಸಾಯುವಷ್ಟರ ಮಟ್ಟಿಗೆ ಇತರರನ್ನು ಪ್ರೀತಿಸುವದರಿಂದ ಅವನು ಹೆಚ್ಚೆಚ್ಚಾಗಿ ಕ್ರಿಸ್ತನಂತಾಗಬಹುದು.

### ಯೋಹಾನ 13:1-17; ಲೂಕ 22:24-30

ಮೂರನೆಯ ಸಂದರ್ಭವು ಯೇಸುವು ಹಿಡಿದುಕೊಡಲ್ಪಟ್ಟ ರಾತ್ರಿಯಲ್ಲಿ ಬಂದಿತು. ಯೇಸುವು ಹೇಗೆ ಕೊನೆಯ ಭೋಜನದಲ್ಲಿ ಎದ್ದು, ತನ್ನ ಕೈಪಾವುಡವನ್ನು ಸುತ್ತಿಕೊಂಡು ತನ್ನ ಶಿಷ್ಯರ ಪಾದಗಳನ್ನು ತೊಳೆದನು ಎಂಬುದನ್ನು ಯೋಹಾನನು ಹೇಳಿದ್ದಾನೆ (ಯೋಹಾನ 13:1-17). ಯಾಕೆ? ಯೇಸುವಿನ ಕೃತ್ಯಗಳಿಗೆ ಲೂಕ 22:24-27 ಒಂದು ಹಿನ್ನೆಲೆಯನ್ನು ಒದಗಿಸುತ್ತದೆ:

> "ಇದಲ್ಲದೆ ತಮ್ಮಲ್ಲಿ ಯಾವನು ಹೆಚ್ಚಿನವನೆನಿಸಿ ಕೊಳ್ಳುವವನು ಎಂಬ ವಿಷಯದಲ್ಲಿ ಅವರೊಳಗೆ ಚರ್ಚೆ ಹುಟ್ಟಿತು. ಆಗ ಆತನು ಅವರಿಗೆ ಅನ್ಯದೇಶದ ಅರಸರು ತಮ್ಮ ತಮ್ಮ ಜನಗಳ ಮೇಲೆ ದೊರೆತನ ಮಾಡುತ್ತಾರೆ, ಮತ್ತು ಅವರ ಮೇಲೆ ಅಧಿಕಾರ ನಡಿಸುವವರು ಧರ್ಮಿಷ್ಠರೆನಿಸಿಕೊಳ್ಳುತ್ತಾರೆ. ನೀವು ಹಾಗಿರಬಾರದು; ನಿಮ್ಮಲ್ಲಿ ಹೆಚ್ಚಿನವನು ಚಿಕ್ಕವನಂತಾಗಬೇಕು, ಮುಖ್ಯಸ್ಥನು ಸೇವಕನಂತಾಗಬೇಕು. ಯಾವನು ಹೆಚ್ಚಿನವನು? ಊಟಕ್ಕೆ ಕೂತವನೋ ಸೇವೆ ಮಾಡುವವನೋ? ಊಟಕ್ಕೆ ಕೂತವನಲ್ಲವೇ. ಆದರೆ ನಾನು ನಿಮ್ಮಲ್ಲಿ ಸೇವೆ ಮಾಡುವವನಂತಿದ್ದೇನೆ."

ಯೇಸುವು ಅವರ ಪಾದಗಳನ್ನು ತೊಳೆಯುವಾಗ, ಆತನು ಅವರ ಮಧ್ಯದಲ್ಲಿ "ಸೇವೆ ಮಾಡುವವನಂತೆ" ಇದ್ದನು.

ಯೇಸುವು ಹಿಡಿದು ಕೊಡಲ್ಪಟ್ಟ ರಾತ್ರಿಯಲ್ಲಿಯೂ ಸಹ ತನ್ನ ಮರಣದ ಮೊದಲು - ಯೇಸುವು ಈ ವಿಷಯದ ಬಗ್ಗೆ ಹೇಳಿದ್ದರೂ - ಶಿಷ್ಯರು ಇನ್ನೂ ಅದೇ ಪ್ರಶ್ನೆಯನ್ನು ಚರ್ಚಿಸುತ್ತಿದ್ದರು! ಅವರು ಕಲಿಯುವವರಂತೆ ಎಂದೂ ಕಾಣಲಿಲ್ಲ! ಲೂಕನ ಪ್ರಕಾರ ವಾಗಿ, ಯೇಸುವು ತಾನು ಮೊದಲು ಕೊಟ್ಟಿದ್ದ ಅದೇ ಉತ್ತರವನ್ನು ಕೊಟ್ಟನು. ಹೀಗಿದ್ದರೂ, ಯೋಹಾನನ ಪ್ರಕಾರ, ಯೇಸುವು ಇನ್ನೂ ಹೆಚ್ಚಾದದ್ದನ್ನು ಮಾಡಿದನು. ಆತನು ಅವರ ಪಾದಗಳನ್ನು ತೊಳೆದನು ಮತ್ತು ಹೀಗೆ ಹೇಳಿದನು,

> ನಾನು ನಿಮಗೆ ಮಾಡಿದ ಮೇರೆಗೆ ನೀವು ಸಹ ಮಾಡುವಂತೆ ನಿಮಗೆ ಮಾದರಿಯನ್ನು ತೋರಿಸಿದ್ದೇನೆ. "ನಿಮಗೆ ನಿಜನಿಜವಾಗಿ ಹೇಳುತ್ತೇನೆ, ದಣಿಗಿಂತ ಆಳು ದೊಡ್ಡವನಲ್ಲ,

> ಕಳುಹಿಸಲ್ಪಟ್ಟವನು ಕಳುಹಿಸಿದವನಿಗಿಂತ ದೊಡ್ಡವನಲ್ಲ. ನೀವು ಇದನ್ನು ತಿಳುಕೊಂಡು ಇದರಂತೆ ಮಾಡಿದರೆ ನೀವು ಧನ್ಯರು'' (ಯೋಹಾನ 13:15-17).

ರಾಜ್ಯದಲ್ಲಿ ''ಅತೀ ದೊಡ್ಡವನೆಂದು'' ಸ್ವೀಕರಿಸಲ್ಪಡವದರ ಬಗ್ಗೆ ಚಿಂತಿಸುವದಕ್ಕಿಂತ ಅತೀ ದೀನ ಸೇವಕನ ಕೆಲಸ ಮಾಡುವದರಲ್ಲಿ, ಊಹಿಸಬಹುದಾದಷ್ಟು ಕನಿಷ್ಠವಾದ ಕೆಲಸವನ್ನು ಮಾಡುವದರಲ್ಲಿ ಮನಸ್ಸುಳ್ಳವರಾಗಿರ ಬೇಕು, ಅರ್ಥಮಾಡಿಕೊಳ್ಳ ಲಾರದ ಜನರ ಪರವಾಗಿಯೂ ಇಲ್ಲವೇ ಗಮನಿಸದವರ ಪರವಾಗಿಯೂ ಇಲ್ಲವೇ ತಮ್ಮನ್ನು ಎದುರಿಸುವವರಾಗಿಯೂ ಮಾಡಲು ಸಿದ್ಧರಾಗಿರಬೇಕೆಂದು ಆತನು ಅವರಿಗೆ ತೋರಿಸಿದನು.

ಯಾರು ದೊಡ್ಡವರು ಎಂಬ ಚರ್ಚೆಯಲ್ಲಿ ಆತನ ಶಿಷ್ಯರು ತೊಡಗಿದ್ದ ಎಲ್ಲಾ ಮೂರು ಸಂದರ್ಭಗಳಲ್ಲಿ ಆತನು ಅವರು ಸೇವಕ ನಾಯಕರಾಗಿರಬೇಕೆಂದು ತೋರಿಸಿದನು. ಯೇಸುವಿನ ಅಧಿಕಾರದಿಂದ ಪ್ರೇರಣೆಯೊಂದಿಗೆ ಮಾತಾಡುವವರು ಸೇವಕ ನಾಯಕರಾಗಿರಬೇಕಾಗಿರುವಾಗ, ಆತನು ಅದೇ ಸಂಗತಿಯನ್ನು ಇಂದು ಸಭೆಯ ನಾಯಕರಿಂದ ಬಯಸುವನಲ್ಲವೇ?

## ''ಸೇವಕ ನಾಯಕತ್ವಕ್ಕೆ'' ಯಾವುದು ಅಗತ್ಯವಿದೆ?

ಆದುದರಿಂದ, ಸಭಾನಾಯಕರು ''ಸೇವಕ ನಾಯಕರಾಗಿರತಕ್ಕದ್ದು'' ಅದರ ಅರ್ಥವೇನು? ಸೇವಕ ನಾಯಕರಿಂದ ಯಾವುದು ಕೇಳಲ್ಪಡುತ್ತದೆ?[1]

### ತಮ್ಮನ್ನು ತಾವು ಸೇವಕರಂತೆ ನೋಡಿಕೊಳ್ಳುವುದು

ಸೇವಕ ನಾಯಕತ್ವವು, ಮೊದಲನೆಯದಾಗಿ, ಸಭೆಯ ನಾಯಕರು ತಮ್ಮನ್ನು ತಾವು ಸಭೆಯ ಸೇವಕರುಗಳೆಂದು ನೋಡಿಕೊಳ್ಳ ಬೇಕಾಗುತ್ತದೆ. ಉದಾಹರಣೆಯಾಗಿ ಹಿರಿಯರು ತಾವು ಗೌರವದ ಸ್ಥಾನವನ್ನು ಹೊಂದಿಕೊಂಡಿದ್ದೇವೆಂದು ಯೋಚಿಸುವವರಾಗಿದ್ದಾರೆ; ಸದಸ್ಯರು ತಮ್ಮ ಸೇವೆ ಮಾಡಬೇಕೆಂದು ತಿಳಿದು ಕೊಳ್ಳುತ್ತಾರೆ. ಅವರು ಸೇವಕ ನಾಯಕರಾಗಿದ್ದರೆ, ಅವರು ತಮ್ಮ ಸೇವೆ ಮಾಡಿಸಿಕೊಳ್ಳಬೇಕೆಂದು, ಇಲ್ಲವೇ ತಮ್ಮ ಪಾತ್ರಕ್ಕಾಗಿ ಗೌರವವನ್ನಾಗಲೀ, ಹೊಗಳಿಕೆಯನ್ನಾಗಲೀ ಪಡೆದು ಕೊಳ್ಳಬೇಕೆಂದು ನಿರೀಕ್ಷಿಸುವದಿಲ್ಲ. ಅದರ ಬದಲು, ಸದಸ್ಯರು ಸೇವೆ ಮಾಡುವದರಲ್ಲಿ ಹೆಚ್ಚು ಉತ್ತಮರಾಗುವಂತೆ, ಅವರು ಸಭೆಯಲ್ಲಿ ಇದ್ದವರಾಗಿ ಸೇವೆ ಮಾಡುವರು ಹಾಗೂ ಸಹಾಯ ಮಾಡುವರು. (ಎಫೆಸ 4:11, 12 ನೋಡಿರಿ.) ಅವರು ತಮ್ಮ ಸ್ಥಾನವನ್ನು ಒಂದು ಅವಕಾಶದಂತೆ ನೋಡುವರು, ನಿರ್ದೇಶಿಸುವದಕ್ಕಾಗಿ ಇಲ್ಲವೇ ಆಜ್ಞೆಗಳನ್ನು ಕೊಡುವದಕ್ಕಾಗಿ ಅಲ್ಲ, ಆದರೆ ಪ್ರತಿಯೊಬ್ಬ ಕ್ರೈಸ್ತನು ''ಆತ್ಮಿಕವಾಗಿ'' ಅವನು ಇಲ್ಲವೇ ಅವಳು ಇರಲಿಕ್ಕಾಗುವಂತೆ ಮತ್ತು ಪರಲೋಕಕ್ಕೆ ಹೋಗಲಿಕ್ಕಾಗುವಂತೆ ಸಹಾಯ ಮಾಡುವದಕ್ಕಾಗಿರುತ್ತದೆ. ಅವರು ಜನರನ್ನು ಸಂಧಿಸುವುದು, ''ಇಲ್ಲಿ ನಿನಗಾಗಿ ನನ್ನ ಆಜ್ಞೆಗಳು ಇವೆ'' ಎಂದಾಗಿ ಅಲ್ಲ, ಆದರೆ ''ನಾನು ನಿನಗೆ ಹೇಗೆ ಸಹಾಯ ಮಾಡಬೇಕು?'' ಎಂದಾಗಿರಬೇಕು.

### ಗುಂಪಿನೊಂದಿಗೆ ಗುರುತಿಸಿಕೊಳ್ಳುವುದು

ಎರಡನೆಯದಾಗಿ, ನಿಜವಾದ ಸೇವಕ ನಾಯಕರು ತಾವು ನಡಿಸುವ ಗುಂಪಿನಿಂದ ''ನಾನು/ಅವರು'' ಎಂಬ ಮನೋಭಾವನೆಯಿಂದ ತಮ್ಮನ್ನು ಬೇರೆಯಾಗಿಟ್ಟುಕೊಳ್ಳುವುದಿಲ್ಲ: ''ನಾನು ಒಳ್ಳೆಯವನು; ಅವರು ಕೆಟ್ಟವರು; ನಾನು ಪ್ರತಿಷ್ಠಿಸಿ ಕೊಂಡವನು; ಅವರು ಉಗುರು ಬೆಚ್ಚಗಿನಂತಿರುವರು; 'ನಾನು' ಬೈಬಲನ್ನು ತಿಳಿದು ಕೊಂಡಿದ್ದೇನೆ; ಅವರು ಅಜ್ಞಾನಿಗಳು'' ಅದರ ಬದಲು ಅವರು ತಮ್ಮನ್ನು ಗುಂಪಿನ ಭಾಗವಾಗಿ ನೋಡಿಕೊಳ್ಳುತ್ತಾರೆ. ''ನೀನು ಮಾಡ

ಬೇಕಾದದ್ದನ್ನು ಮಾಡುತ್ತಿರುವದಿಲ್ಲ" ಎಂದು ಅವರು ಹೇಳಲು ಹೋಗುವದಿಲ್ಲ, ಆದರೆ "ನಾವು ಮಾಡಬೇಕಾದದ್ದನ್ನು ಮಾಡುತ್ತಿರುವದಿಲ್ಲ" ಎಂದು ಹೇಳುತ್ತಾರೆ. ದೇಶದ ಜನಾಂಗಗಳಿಂದ ತಮ್ಮನ್ನು ಬೇರೆಯಾಗಿಟ್ಟು ಕೊಳ್ಳಬೇಕೆಂಬ ದೇವರ ಆಜ್ಞೆಗೆ ಅವಿಧೇಯರಾಗಿ ಕಾನಾನ್ಯರ ಕುಮಾರ್ತೆಗಳನ್ನು ಮದುವೆಯಾದ ಯೆಹೂದ್ಯರನ್ನು ಕಂಡು ಹಿಡಿದಾಗ ಈ ವಿಷಯದಲ್ಲಿ ಎಜ್ರನು ಒಳ್ಳೆಯ ಉದಾಹರಣೆಯನ್ನು ತೋರಿಸಿದನು, ಇಲ್ಲಿ ಎಜ್ರನ ಪ್ರತಿಕ್ರಿಯೆ ಇದೆ:

> ಈ ವರ್ತಮಾನವನ್ನು ಕೇಳಿದೊಡನೆ ನಾನು ಬಟ್ಟೆ ಮೇಲಂಗಿಗಳನ್ನು ಹರಿದು ಕೊಂಡು ತಲೆಯ ಮತ್ತು ಗಡ್ಡದ ಕೂದಲುಗಳನ್ನು ಕಿತ್ತು ಕೊಂಡು ಸ್ತಬ್ಧನಾಗಿ ಕೂತು ಕೊಂಡೆನು. ...
>
> ಇಸ್ರಾಯೇಲ್‌ದೇವರ ವಿಧಿಗಳನ್ನು ಗೌರವಿಸಿದವರೆಲ್ಲರೂ ಸೆರೆಯಿಂದ ಬಂದವರ ದ್ರೋಹದ ಸಲುವಾಗಿ ಕಳವಳಗೊಂಡು ನನ್ನನ್ನು ಕೂಡಿಕೊಂಡರು. ನಾನು ಸಂಧ್ಯಾನೈವೇದ್ಯ ಸಮರ್ಪಣೆಯ ಹೊತ್ತಿನ ವರೆಗೂ ಸ್ತಬ್ಧನಾಗಿ ಕೂತು ಕೊಂಡಿದ್ದೆನು; ಆಮೇಲೆ ದೇಹದಂಡನೆ ಮಾಡುವದನ್ನು ಬಿಟ್ಟು ಹರಿದ ಬಟ್ಟೆ ಮೇಲಂಗಿಗಳಿಂದ ಕೂಡಿದವನಾಗಿಯೇ ಮೊಣಕಾಲೂರಿ ನನ್ನ ದೇವರಾದ ಯೆಹೋವನ ಕಡೆಗೆ ಕೈಗಳನ್ನೆತ್ತಿ ಪ್ರಾರ್ಥಿಸಿದ್ದೇನಂದರೆ "ನನ್ನ ದೇವರೇ, ನಾನು ಮನಗುಂದಿದವನಾಗಿದ್ದೇನೆ; ನಿನ್ನ ಕಡೆಗೆ ಮುಖವನ್ನೆತ್ತುವದಕ್ಕೆ ನಾಚಿಕೊಳ್ಳುತ್ತೇನೆ. ನನ್ನ ದೇವರೇ, ನಮ್ಮ ಪಾಪಗಳು ನಮ್ಮ ತಲೆಮೀರಿ ಬೆಳೆದವು, ನಮ್ಮ ಅಪರಾಧವು ಆಕಾಶವನ್ನು ಮುಟ್ಟುವಷ್ಟು ದೊಡ್ಡದಾಯಿತು. ನಾವು ನಮ್ಮ ಪಿತೃಗಳ ಕಾಲದಿಂದ ಇಂದಿನ ವರೆಗೂ ಮಹಾಪರಾ ಧಿಗಳೇ, ..." (ಎಜ್ರ 9:3-7).

ಎಜ್ರನು ತಾನು ದೇಶದ ಒಬ್ಬ ಮಹಿಳೆಯೊಂದಿಗೆ ಅಂತರ್ - ವಿವಾಹ ಮಾಡಿಕೊಂಡನೆಂಬುದಕ್ಕೆ ಸೂಚನೆಯಿಲ್ಲದಿದ್ದರೂ ಅವನು ಘಟನೆಯ ಬಗ್ಗೆ ತಾನೇ ಅಪರಾಧಿಯಂತೆ ಮಾತಾಡಿದನು. ಅವನ ಪ್ರತಿಕ್ರಿಯೆಯ ಭಾಗವು ಇಸ್ರಾಯೇಲಿನಲ್ಲಿಯ ಸಾಮಾಜಿಕ ಅರುಹಿನಿಂದ ವಿವರಿಸಲ್ಪಟ್ಟರೂ, ಎಜ್ರನು ತಾನು ನಡಿಸಿದ ಜನರೊಂದಿಗೆ ತನ್ನನ್ನು ಗುರುತಿಸಿಕೊಂಡನು ಎಂಬುದು ಸ್ಪಷ್ಟವಾಗಿದೆ. ಸಭಾನಾಯಕರು ಇಂದು ಸೇವಕ ನಾಯಕರಾಗಿರುವದಕ್ಕಾಗಿ ತಾವು ನಡಿಸುವ ಜನರೊಂದಿಗೆ ತಮ್ಮನ್ನು ಗುರುತಿಸಿಕೊಳ್ಳಬೇಕು.

**ಇತರರನ್ನು ಮೊದಲಾಗಿ ಇಡುವುದು**

ಮೂರನೆಯದು, ಸಭಾನಾಯಕರು ತಮ್ಮ ಸ್ವಂತಕ್ಕಿಂತ ಮೊದಲು ಸದಸ್ಯರ ಸುಕ್ಷೇಮ ವನ್ನು ಹುಡುಕಬಾರದು, ಅವರು ತಮ್ಮನ್ನು ತಾವೇ ಮೆಚ್ಚಿಸಿಕೊಳ್ಳಲು ಹುಡುಕಬಾರದು, ಆದರೆ ಕ್ರಿಸ್ತನಂತೆ, ಇತರರನ್ನು ಮೆಚ್ಚಿಸಲು ಹುಡುಕಬೇಕು (ರೋಮಾಪುರ 15:1-3). "ದೃಢವಾದ ನಂಬಿಕೆಯುಳ್ಳ ನಾವು ನಮ್ಮ ಸುಖವನ್ನು ನೋಡಿಕೊಳ್ಳದೆ ದೃಢವಿಲ್ಲದವರ ಅನುಮಾನಗಳನ್ನು ಸಹಿಸಿಕೊಳ್ಳಬೇಕು. ನಮ್ಮಲ್ಲಿ ಪ್ರತಿಯೊಬ್ಬನು ತನ್ನ ನೆರೆಯವನ ಹಿತವನ್ನೂ ಭಕ್ತಿವೃದ್ಧಿಯನ್ನೂ ಅಪೇಕ್ಷಿಸುವವನಾಗಿ ಅವನ ಸುಖವನ್ನು ನೋಡಿಕೊಳ್ಳಲಿ. ..."

ಮೋಶೆಯು ನಾಯಕರಿಗಾಗಿ ಒಂದು ಉದಾಹರಣೆಯನ್ನಿಟ್ಟಿರುವನು, ಅರಣ್ಯದಲ್ಲಿ ಇಸ್ರಾಯೇಲ್ಯರು ಪಾಪಮಾಡಿದ ತರುವಾಯ ಮತ್ತು ದೇವರು ಅವರನ್ನು ನಾಶಪಡಿಸಿ, ಮೋಶೆಯನ್ನು ಒಂದು ದೊಡ್ಡ ಜನಾಂಗವಾಗುವಂತೆ - ಮಾಡುವೆನೆಂದು ಭಯಪಡಿಸಿದಾಗ, ಅವನು ಹೀಗೆ ಹೇಳಿ ಬೇಡಿಕೊಂಡನು: "ಅಯ್ಯೋ, ಅಯ್ಯೋ ಈ ಜನರು ಮಹಾಪಾಪವನ್ನು ಮಾಡಿದ್ದಾರೆ, ... ಆದರೂ ನೀನು ಕರುಣವಿಟ್ಟು ಅವರ ಪಾಪವನ್ನು ಕ್ಷಮಿಸಬೇಕು. ಇಲ್ಲವಾದರೆ ನೀನು ಬರೆದಿರುವ [ಜೀವಿತರ] ಪಟ್ಟಿಯಿಂದ ನನ್ನ ಹೆಸರನ್ನೂ ಅಳಿಸಿಬಿಡಬೇಕೆಂದು ಕೇಳಿಕೊಳ್ಳುತ್ತೇನೆ!" (ವಿಮೋಚನಕಾಂಡ 32:31, 32). ಅವರ ಅಪರಾದವನ್ನು ತನ್ನ ಮೇಲೆ ತೆಗೆದು ಕೊಳ್ಳುವುದು

ಮೋಶೆಗೆ ಅಸಾಧ್ಯವಾಗಿತ್ತು: "ಯಾರಾರು ನನ್ನ ಮಾತನ್ನು ಮೀರಿ ಪಾಪಮಾಡಿದ್ದಾರೋ ಅವರ ಹೆಸರುಗಳನ್ನೇ ನನ್ನ ಬಳಿಯಲ್ಲಿರುವ ಪಟ್ಟಿಯಿಂದ ನಾನು ಅಳಿಸಿ ಬಿಡುವೆನು" ಎಂದು ದೇವರು ಹೇಳಿದನು (ವಿಮೋಚನಕಾಂಡ 32:33). ಹೀಗಿದ್ದರೂ, ಮೋಶೆಯು ತಾನು ನಡಿಸುತ್ತಿದ್ದವರಿಗೆ ಒಳಗಾಗುವುದು ತನಗೆ ತನ್ನ ವೈಯಕ್ತಿಕ ವಿಚಾರಗಳಿಗಿಂತ ಹೆಚ್ಚು ಮಹತ್ವದ್ದಾಗಿದೆ ಎಂಬುದನ್ನು ತೋರಿಸಿದನು (ಹೋಲಿಸು ರೋಮಾಪುರ 9:2, 3).

ಸೇವಕ ನಾಯಕರ ತೀರ್ಮಾನಗಳು ಕೇವಲ ನಾಯಕನ ಮೆಚ್ಚಿಕೆಯ ಮೇಲಾಗಲೀ ಇಲ್ಲವೇ ನಾಯಕರಿಗಾಗಿ ಯಾವುದು ಒಳ್ಳೆಯದಾಗಿರುವುದು ಎಂಬುದರ ಮೇಲಾಗಲೀ ಕೇವಲ ಅವಲಂಭಿತವಾಗಿರುವದಿಲ್ಲ, ಆದರೆ ಮಂದೆಯ ಒಳತಿಗಾಗಿ ಇರುವುದು. ಅವರು ಹೇಳುವ ಮಾಡುವ ಮತ್ತು ತೀರ್ಮಾನಿಸುವ ಪ್ರತಿಯೊಂದೂ ಸಭೆಯ ಉದ್ಧಾರಕ್ಕೋಸ್ಕರ ಗುರಿಹೊಂದಿರುವುದು. ಉದಾಹರಣೆಯಾಗಿ, ನಾಯಕರು ಭಾನುವಾರ ಪ್ರಾತಃಕ್ಕಾಲದ ಆರಾಧನೆಗಳು ಬೆಳಿಗ್ಗೆ 10:00 ಪ್ರಾರಂಭವಾಗ ಬೇಕೆಂದು ಬಯಸಿದರೆ, ಆದರೆ ಸಭೆಯಲ್ಲಿಯ ಬೇರೆ ಪ್ರತಿಯೊಬ್ಬರು 9:00ಕ್ಕೆ ಪ್ರಾರಂಭವಾಗಬೇಕೆಂದು ಬಯಸಿದರೆ, ಸೇವಕ ನಾಯಕರು ಆ ಸಮಯವನ್ನು ಆಯ್ದುಕೊಳ್ಳದಿದ್ದರೂ, ಸಭೆಯ ಒಳತಿಗಾಗಿ 9:00 ಗಂಟೆ ಸಮಯವನ್ನು ಒಪ್ಪಿಕೊಳ್ಳುತ್ತಾರೆ.

**ಸೇವೆಯ ಪ್ರಯತ್ನವನ್ನು ವಿನಿಯೋಗಿಸುವುದು**

ನಾಲ್ಕನೆಯದು, ಸಭಾನಾಯಕರು ಸಮಯವನ್ನು ಪ್ರಯತ್ನವನ್ನೂ ಕೆಲಸದಲ್ಲಿ ಕಳೆಯ ಬೇಕು: ಅದು *ಕೆಲಸ* ವಾಗಿರುತ್ತದೆ! ಸೇವಕನ ಪಾತ್ರವು ಕೆಲಸ ಮಾಡುವದಾಗಿದೆ; ಅದೇ ರೀತಿ ಯಲ್ಲಿ, ಸಭೆಯಲ್ಲಿ ಸೇವಕ ನಾಯಕನ ಪಾತ್ರವು ಕೆಲಸ ಮಾಡುವುದಾಗಿದೆ. "ಸಭಾಧ್ಯಕ್ಷನ ಉದ್ಯೋಗವನ್ನು ಪಡಕೊಳ್ಳಬೇಕೆಂದಿರುವವನು ಒಳ್ಳೇ ಕೆಲಸವನ್ನು ಅಪೇಕ್ಷಿಸುವವನಾಗಿದ್ದಾನೆ" ಎಂದು ಪೌಲನು ಹೇಳಿದನು (1 ತಿಮೊಥೆ 3:1; KJV). ಸಭಾಹಿರಿಯನು "ಬಹಳ ಮಹತ್ವದ," "ದೊಡ್ಡಗೌರವದ," ಇಲ್ಲವೇ "ಸಾಕಷ್ಟು ಮಹಿಮೆಯ" ಸ್ಥಾನವನ್ನು ಅಪೇಕ್ಷಿಸುವನು ಎಂದು ಪೌಲನು ಹೇಳಲಿಲ್ಲ. ಹಿರಿಯನಂತೆ ಸೇವೆ ಮಾಡುವುದು ಕೆಲಸವನ್ನು ಒಳಗೊಂಡಿರುತ್ತದೆ!

ಸಭಾ ಹಿರಿಯನಾಗಿ ನೇಮಕವಾದ ಒಬ್ಬ ಮನುಷ್ಯನು ಗೌರವವನ್ನು ಹುಡುಕಿದರೆ ಮತ್ತು ಸಭೆಯ ಸೇವೆ ಮಾಡಲು ಅಪೇಕ್ಷೆಯಿಲ್ಲದಿದ್ದರೆ, ಅವನು ಬಹುಶಃ ಸೇವಕ ನಾಯಕನ ಪಾತ್ರವು ತಪ್ಪಿಸಿಕೊಳ್ಳಲಾರದಂಥದ್ದಾಗಿರದೆ ಎಂದು ಕಂಡು ಕೊಳ್ಳುವನು ಸಭಾ ಹಿರಿಯನ ಪಾತ್ರವು ಗೌರವವುಳ್ಳದ್ದಾಗಿರದೇ ಬಹಳ ಕೆಲಸವನ್ನು (ಸೇವೆಯನ್ನು) ಒಳಗೊಂಡಿದೆ ಎಂದು ಅವನು ಕಂಡು ಕೊಳ್ಳುವನು. "ಗೌರವವನ್ನು" ಕುರಿತು, ಅವನು ಸ್ಥಳಿಕ ಸಭೆಯ ಕೆಲಸವು ಚೆನ್ನಾಗಿ ನಡೆದರೆ ಪ್ರಸಂಗಿಯು ಹೊಗಳಲ್ಪಡುತ್ತಾನೆ; ಕೆಲಸವು ಕೆಟ್ಟದ್ದಾಗಿ ಹೋದರೆ, ಹಿರಿಯರು ಧೂಷಿಸಲ್ಪಡುತ್ತಾರೆ ಎಂಬುದನ್ನು ತಿಳಿದು ಕೊಳ್ಳುವನು. ಜನರಿಂದ ಗೌರವವನ್ನು ಹೊಂದಿಕೊಳ್ಳುವದಕ್ಕಿಂತ, ಅವನು ಕೆಲಸವು ತಾಸುಗಳ ಕೂಟಗಳನ್ನು ದೈಹಿಕ ಕೆಲಸವನ್ನೂ ನಿರಾಶೆಗೊಂಡ ಕುಪಿತರಾದ ಸದಸ್ಯರಿಂದ ನಿರಂತರ ವಿರೋಧಗಳನ್ನೂ ಫಲವಿಲ್ಲದ ಸಂದರ್ಶಗಳನ್ನೂ, ಬಲಹೀನರ ಮತ್ತು ಅಪನಂಬಿಗಸ್ತರ ಚಿಂತನೆಯನ್ನೂ, ಜನರು ಮಾರ್ಪಡದೇ ಇರುವದರಿಂದ ನಿರಾಶೆಯನ್ನೂ ಒಳಗೊಂಡಿರುತ್ತದೆ. ಸಭೆಯಲ್ಲಿ ನಾಯಕತ್ವವು ಸೇವೆಯ ಅಗತ್ಯತೆಯುಳ್ಳದ್ದಾಗಿದೆ!

**ಇತರರೊಂದಿಗೆ ಸೌಮ್ಯವಾಗಿ ವರ್ತಿಸುವುದು**

ಐದನೆಯದು, ನಾಯಕರು ಸಭೆಯೊಂದಿಗೆ ದಯೆಯ, ಸೌಮ್ಯತೆಯ ಮಾರ್ಗದಲ್ಲಿ ವರ್ತಿಸಬೇಕು. ಯಾವುದೇ ನಾಯಕನು ಏಕಕಾಲಕ್ಕೆ ಇತರರ ಸೇವೆ ಮಾಡುವವನೂ ಮತ್ತು ಹಟಮಾರಿತನದ, ದಯೆಯಿಲ್ಲದ ದಬ್ಬಾಳಿಕೆಯ ಮಾರ್ಗದಿಂದ ನಡಿಸಿಕೊಳ್ಳುವವನೂ

ಆಗಿರಲಾರನು, ಅವರು ಸೇವೆ ಮಾಡಬೇಕಾಗಿದ್ದವರೊಂದಿಗೆ ದಯೆಯಿಲ್ಲದೇ ವರ್ತಿಸುವದರ ಬದಲು, ಸಭಾನಾಯಕರು ಅಪೊಸ್ತಲ ಪೌಲನಿಂದ ಪಾಠವನ್ನು ತೆಗೆದುಕೊಳ್ಳಬೇಕು.

ಪೌಲನು ಕರ್ತನ ಸಭೆಯ ಸ್ಥಳಿಕ ಸಭೆಗಳ ಒಬ್ಬ ಮಹಾನಾಯಕನಾಗಿದ್ದನು, ಅವುಗಳಿಗೆ ಆಜ್ಞಾಪಿಸಲು ತನಗೆ ಹಕ್ಕು ಇದೆಯೆಂದು ಹೇಳಿಕೊಂಡನು. ಅವನು ಅವುಗಳನ್ನು ಹೇಗೆ ನಡಿಸಿದನು? ಅವನು ಸಾಮಾನ್ಯವಾಗಿ ಆಜ್ಞಾಪಿಸಿದನೋ? ಅವರೊಂದಿಗೆ ವ್ಯವಹರಿಸುವಲ್ಲಿ ಅವನು ಕಠಿಣನಾಗಿದ್ದನೋ? ನಿಯಮದಂತೆ, ಅವನ ಮಾತುಗಳು ಮೃದುವಾಗಿದ್ದವೆಂದು ಅವನ ಪತ್ರಿಕೆಯನ್ನು ಓದುವಂತೆ ನಾವು ಕಂಡು ಕೊಳ್ಳುತ್ತೇವೆ. ಅವು ಯಾರಿಗೆ ಬರೆಯಲ್ಪಟ್ಟವೋ ಅವರ ಒಳತಿಗಾಗಿ ಯಾವಾಗಲೂ ಉದ್ದೇಶಿಸಲ್ಪಟ್ಟಿದ್ದವು. ಕಾರ್ಯನಿರತನಾಗಿರುವ ಒಬ್ಬ ಸೇವಕ ನಾಯಕನ ಒಳ್ಳೆಯ ಚಿತ್ರಕ್ಕಾಗಿ, 1 ಥೆಸಲೋನಿಕ 2:5-12ನ್ನು ನೋಡಿರಿ:

> ... ನಿಮಗೆ ತಿಳಿದಿರುವ ಪ್ರಕಾರ ನಾವು ಎಂದಿಗೂ ಮುಖಸ್ತುತಿಯನ್ನು ಮಾಡುವವರಾಗಿ ಕಾಣಬಂದಿಲ್ಲ, ಮತ್ತು ದ್ರವ್ಯಾಶೆಯನ್ನು ಮರೆಮಾಡುವದಕ್ಕಾಗಿ ವೇಷವನ್ನು ಹಾಕಿಕೊಂಡವರಾಗಿಲ್ಲ; ಇದಕ್ಕೆ ದೇವರೇ ಸಾಕ್ಷಿ. ಇದಲ್ಲದೇ ನಾವು ಕ್ರಿಸ್ತನ ಅಪೊಸ್ತಲರಾಗಿರುವದರಿಂದ ನಮಗೆ ಗೌರವವನ್ನು ಕೊಡಬೇಕೆಂದು ಹೇಳಬಹುದಾಗಿದ್ದರೂ ಮನುಷ್ಯರಿಂದ ಬರುವ ಮಾನವನ್ನು ನಿಮ್ಮಿಂದಾಗಲಿ ಇತರರಿಂದಾಗಲಿ ಹೊಂದಲಪೇಕ್ಷಿಸುವವರಾಗಿಲ್ಲ. ತಾಯಿಯು ತನ್ನ ಮಕ್ಕಳನ್ನು ಪೋಷಿಸುತ್ತಾಳೋ ಎಂಬಂತೆ ನಾವು ನಿಮ್ಮ ಮಧ್ಯದಲ್ಲಿ ವಾತ್ಸಲ್ಯದಿಂದ ನಡಕೊಂಡಿದ್ದೆವು. ನೀವು ನಮಗೆ ಅತಿಪ್ರಿಯರಾದ ಕಾರಣ ನಾವು ನಿಮ್ಮಲ್ಲಿ ಮಮತೆಯುಳ್ಳವರಾಗಿ ದೇವರ ಸುವಾರ್ತೆಯನ್ನು ಹೇಳುವದಕ್ಕೆ ಮಾತ್ರವಲ್ಲದೆ ನಿಮಗೋಸ್ಕರ ಪ್ರಾಣವನ್ನೇ ಕೊಡುವದಕ್ಕೆ ಸಂತೋಷಿಸುವವರಾದೆವು. ಸಹೋದರರೇ, ನಾವು ನಿಮ್ಮಲ್ಲಿ ಯಾರ ಮೇಲಿಯೂ ಭಾರಹಾಕಬಾರದೆಂದು ಹಗಲಿರುಳು ದುಡಿದು ಜೀವನಮಾಡಿಕೊಳ್ಳುತ್ತಾ ದೇವರ ಸುವಾರ್ತೆಯನ್ನು ನಿಮಗೆ ಸಾರಿದೆವು; ಆ ನಮ್ಮ ಕಷ್ಟವೂ ಪ್ರಯಾಸವೂ ನಿಮ್ಮ ನೆನಪಿನಲ್ಲಿರುವದಷ್ಟೆ. ನಂಬುವವರಾದ ನಿಮ್ಮ ವಿಷಯದಲ್ಲಿ ನಾವು ಎಷ್ಟೋ ಶುದ್ಧರಾಗಿಯೂ ನೀತಿ ವಂತರಾಗಿಯೂ ನಿರ್ದೋಷಿಗಳಾಗಿಯೂ ನಡೆದುಕೊಂಡೆವೆಂಬದಕ್ಕೆ ನೀವು ಸಾಕ್ಷಿಗಳು, ದೇವರೂ ಸಾಕ್ಷಿ. ತಂದೆಯು ತನ್ನ ಮಕ್ಕಳಿಗೆ ಹೇಗೋ ಹಾಗೆಯೇ ನಾವು ನಿಮ್ಮಲ್ಲಿ ಪ್ರತಿಯೊಬ್ಬನಿಗೆ ಬುದ್ಧಿ ಹೇಳುತ್ತಾ ಧೈರ್ಯಪಡಿಸುತ್ತಾ ತನ್ನ ರಾಜ್ಯಪ್ರಭಾವಗಳಲ್ಲಿ ಪಾಲುಗಾರರಾಗುವದಕ್ಕೆ ಕರೆಯುವ ದೇವರಿಗೆ ಯೋಗ್ಯರಾಗಿ ನೀವು ನಡೆಯಬೇಕೆಂದು ಖಂಡಿತವಾಗಿ ಹೇಳುತ್ತಾ ಇದ್ದೆವೆಂಬದು ನಿಮಗೇ ತಿಳಿದದೆ.

ಸೇವಕ ನಾಯಕರು, ತನ್ನ ಮಗುವನ್ನು "ಪೋಷಿಸುವ ತಾಯಿಯು ಮೃದುವಾಗಿ ಜೋಪಾಸನೆ ಮಾಡುವಂತೆ" ಇತರರೊಂದಿಗೆ ಸೌಮ್ಯತೆಯಿಂದ ವ್ಯವಹರಿಸತಕ್ಕದ್ದು. ತಾವು ನಡಿಸುವಂಥವರು ತಮಗೆ ಬಹಳ ಪ್ರೀತಿಯುಳ್ಳವರಾಗಿರುವದರಿಂದ ಅವರು ತಮ್ಮನ್ನೆ ಹಂಚಿಕೊಳ್ಳುವರು. ಅಗತ್ಯವಿದ್ದರೆ ತಮ್ಮ ಕೆಲಸವನ್ನು ಪೂರೈಸಲು ಅವರು ಹಗಲೂ ರಾತ್ರಿ ದುಡಿಯುವರು. ಸಭೆಗಾಗಿ ಮಾದರಿಯಾಗಿರಲು ಅವರು ಶುದ್ಧತೆಯಿಂದ, ನೀತಿಯಿಂದ ಮತ್ತು ಕಳಂಕವಿಲ್ಲದವರಾಗಿ ವರ್ತಿಸುವರು. ತಮ್ಮ ನಾಯಕತ್ವಕ್ಕಾಗಿ ನೋಡುವವರನ್ನು "ತಂದೆಯು ತನ್ನ ಸ್ವಂತ ಮಕ್ಕಳನ್ನು ನೋಡುವಂತೆ" ಯಾವಾಗಲೂ ದಯೆಯಿಂದ ನೋಡಿಕೊಳ್ಳುವರು. ನಿಜವಾದ ಸೇವಕ ನಾಯಕರು ಕ್ರೈಸ್ತರಿಗೆ ದೇವರಿಗೆ ಯೋಗ್ಯವಾದ ಜೀವಿತ ನಡಿಸಲಿಕ್ಕೆ ಸಹಾಯ ಮಾಡುವದನ್ನು ತಮ್ಮ ಗುರಿಯನ್ನಾಗಿ ಇಟ್ಟು ಕೊಳ್ಳುವರು.

**ಆದರ್ಶದಿಂದ ನಡಿಸುವುದು**

ಆರನೆಯದು, ಸೇವಕ ನಾಯಕರು ಆದರ್ಶದಿಂದ ನಡಿಸುವ ಅಗತ್ಯತೆಯಿದೆ. ಅವರು ಇತರರಿಗೆ ಹೋಗುವ ಮಾರ್ಗವನ್ನು ಸುಮ್ಮನ್ನೇ ಹೇಳುವದಿಲ್ಲ; ಅವರು, ಯೇಸುವು ಮಾಡಿದಂತೆ, ಅವರ ಮುಂದೆ ಹೋಗುವುದರಿಂದ ಅವರಿಗೆ ಮಾರ್ಗ ತೋರಿಸುವರು

(ನೋಡಿರಿ 1 ಪೇತ್ರ 5:3). ದೇವಾಲಯದ ಕಟ್ಟಡವನ್ನು ಸ್ವಚ್ಛಮಾಡಲು ತನ್ನ ಹಸ್ತಗಳನ್ನು ಕೊಳೆ ಮಾಡಿಕೊಳ್ಳಲು ಸಿದ್ಧನಾಗಿರದವನನ್ನು, ಭೋಜನದ ನಂತರ ತಟ್ಟೆಗಳನ್ನು ತೊಳೆಯದಷ್ಟು "ಆತ್ಮಿಕ"ನಾಗಿರುವವನನ್ನು ಇಲ್ಲವೇ ಅಗತ್ಯತೆಯಲ್ಲಿರುವವರಿಗೆ ಸಮಯವಿಲ್ಲದಷ್ಟು "ಮಹತ್ವದ ಜನರೊಂದಿಗೆ" ಕಾರ್ಯನಿರತನಾದವನನ್ನು ಹಿರಿಯನಾಗಿ ಸೇವೆ ಮಾಡಲು ಕೇಳಿಕೊಳ್ಳ ಬಾರದು. ಅವನು ಸೇವಕ ನಾಯಕನಾಗಿರಲಾರನು.

ಸಭಾ ನಾಯಕರು ತಾವು ಮಾಡದೇ ಇರುವಂಥದ್ದನ್ನು, ಮಾಡದ್ದನ್ನು ಮಾಡಲಾರದಂಥದ್ದನ್ನು ಮಾಡಬೇಕೆಂದು ಸದಸ್ಯರಿಗೆ ಎಂದೂ ಕೇಳಬಾರದು. "ಆ ದಿಬ್ಬದ ಮೇಲೆ ದಾಳಿ ಮಾಡಿರಿ ಮತ್ತು ವೈರಿಯ ಮಿಶಿನ್ ಗನ್‌ನನ್ನು ತೆಗೆದು ಕೊಳ್ಳಿರಿ! ನನಗೆ ಕೃತ್ಯದ ಒಳ್ಳೇ ದೃಷ್ಟಿಕೋನವಿರುವ ಇಲ್ಲಿ ನಾನು ಉಳಿದು ಕೊಳ್ಳುವೆನು" ಎಂದು ಹೇಳುವ ಅಧಿಕಾರಿಯನ್ನು ಸೈನಿಕರು ಹಿಂಬಾಲಿಸುವದಿಲ್ಲ, "ನನ್ನನ್ನು ಹಿಂಬಾಲಿಸಿರಿ! ನಾವು ಆ ಗನ್ನನ್ನು ತೆಗೆದು ಕೊಳ್ಳಲಿಕ್ಕಿದ್ದೇವೆ" ಎಂದು ಹೇಳುವ ಅಧಿಕಾರಿಯನ್ನು ಅವರು ಹಿಂಬಾಲಿಸುತ್ತಾರೆ, ಒಂದು ಪುರಾತನ ಹೇಳಿಕೆಯು ಯೋಗ್ಯವಾಗಿದೆ: "ನೀನು ತಿಳಿಯದೇ ಇರುವುದನ್ನು ನೀನು ಬೋಧಿಸಲಾರಿ; ನೀನು ಹೋಗದೇ ಇರುವಲ್ಲಿ ನೀನು ನಡಿಸಲಾರಿ."

## ಮುಕ್ತಾಯ

ನಾವು ಹೇಳಿದ ಹೆಚ್ಚಾದದ್ದನ್ನು ಈ ರೀತಿಯಲ್ಲಿ ಸರಾಂಶವಾಗಿ ಹೇಳಬಹುದು:

ಸಭೆಯಲ್ಲಿ ಸೇವಕ ನಾಯಕರು ...

... ಸೇವೆ ಮಾಡಿಸಿಕೊಳ್ಳುವದಕ್ಕಿಂತ ಸೇವೆ ಮಾಡುವದನ್ನು ಹುಡುಕಬೇಕು.

... ಪ್ರಾಧಾನ್ಯತೆಗಾಗಿ, ಬಲಕ್ಕಾಗಿ ಇಲ್ಲವೇ ಗೌರವಕ್ಕಾಗಿ ಅಲ್ಲ, ಆದರೆ ಸೇವೆಗಾಗಿ ಅವಕಾಶಗಳನ್ನು ಹುಡುಕಬೇಕು.

... ಅವರು, ತಮ್ಮ ನಾಯಕತ್ವದ ಪಾತ್ರಗಳಲ್ಲಿ ಸಭೆಯ ಲಾಭಕ್ಕಾಗಿ ಅಸ್ತಿತ್ವದಲ್ಲಿರುವೆವೆಂಬುದನ್ನು ಅರ್ಥಮಾಡಿಕೊಳ್ಳಬೇಕು; ಸಭೆಯು ಅವರಿಗಾಗಿ ಅಸ್ತಿತ್ವದಲ್ಲಿರುವದಿಲ್ಲ.

... ಸಭೆಯ ಮೇಲೆ ಅಲ್ಲ, ಆದರೆ ಸಭೆಯ ಭಾಗದಂತೆ ತಮ್ಮನ್ನು ಯೋಚಿಸಿ ಕೊಳ್ಳಬೇಕು.

... ಮಂದೆಗಿಂತ ಕಡಿಮೆಯಾಗಿ ತಮ್ಮನ್ನು ಕುರಿತು ಚಿಂತಿಸುವವರಾಗಿರಬೇಕು.

... ಸಭೆಗಾಗಿ ಅತ್ಯುತ್ತಮವಾದದ್ದನ್ನು ಮಾಡಲು ಪ್ರೀತಿಯಿಂದ ಪ್ರೇರೇಪಿಸಲ್ಪಡತಕ್ಕದ್ದು.

... ತಾವು ನಡಿಸುತ್ತಿರುವವರ ಲಾಭಕ್ಕಾಗಿ - ತಮ್ಮನ್ನು ವ್ಯಯಿಸಲು, ತಮ್ಮನ್ನು ಕೊಡಲು, ತ್ಯಾಗಮಾಡಲು - ಮರಣ ಹೊಂದಬೇಕಾದರೂ ಸಹ - ಸಿದ್ಧರಾಗಿರಬೇಕು.

... ನಾಯಕತ್ವವು ಒಂದು ಕೆಲಸವಾಗಿದೆ ಮತ್ತು ಅದನ್ನು ಮಾಡಲು ಸಮಯವನ್ನೂ ಪ್ರಯತ್ನವನ್ನೂ ಕಳೆಯುವದಕ್ಕಾಗಿ ಸಿದ್ಧರಾಗಿರುವದನ್ನು ಗುರುತಿಸುವುದು.

... ನಾಯಕತ್ವಕ್ಕಾಗಿ ತಮ್ಮ ಕಡೆಗೆ ನೋಡುವವರೊಂದಿಗೆ ಮೃದುವಾಗಿ ನಡೆದು ಕೊಳ್ಳುವುದು.

... ಹೇಳುವದರಿಂದ ಅಲ್ಲ, ಆದರೆ ಮಾಡುವದರಿಂದ, ಇಲ್ಲವೇ ಉದಾಹರಣೆಯಿಂದ ನಡಿಸುವುದು; ತಾವು ಮಾಡಲಿಕ್ಕೆ ಸಿದ್ಧರಾಗದೇ ಇರುವದನ್ನು ಹಿಂಬಾಲಕರು ಮಾಡುವಂತೆ ಅವರು ಕೇಳುವದಿಲ್ಲ.

ಸೇವಕ ನಾಯಕತ್ವವು ಪರಿಣಾಮಕಾರಿಯಾದದ್ದಾಗಿರುವುದೋ? 1991ರಲ್ಲಿ, ಎಲ್ಲಾ ಸ್ವಯಂ ಸೇವಕ ಸೈನ್ಯಗಳಿರುವದರ ಮೌಲ್ಯವನ್ನು ಹೊಗಳುತ್ತ, ಕೆನ್ ಅಡೆಲ್ಮಾನ್ ಅವರು ಜೋಯಿಂಟ್ ಚೀಫ್ ಆಫ್ ಸ್ಟಾಫ್‌ದ ಚೇರ್ಮನ್ ಕೊಲಿನ್ ಪೊವೆಲ್ ಅವರನ್ನು ಉಲ್ಲೇಖಿಸಿದ್ದಾರೆ:

> “ಗಲ್ಫದಲ್ಲಿ ಕಟ್ಟುವದಕ್ಕಿಂತ ಮೊದಲೇ, ಜನರಲ್ ಪೊವೆಲ್ ಅವರು ನಮ್ಮ ಸೈನ್ಯಗಳು ಚೆನ್ನಾಗಿ ಕೆಲಸಮಾಡುವವು ಎಂದು ಹೊಗಳಿಕೊಂಡರು. ಅವರಿಗೆ ಅವರನ್ನು ರೂಪಿಸುವದರ ಬಗ್ಗೆ ಯಾವುದೂ ರಹಸ್ಯವಾದದ್ದಾಗಿರಲಿಲ್ಲ: “ಪ್ರಾರಂಭಿಸಲು ನಿಮ್ಮಲ್ಲಿ ಅರ್ಹತೆಯುಳ್ಳ ಜನರು ಇದ್ದರೆ; ನೀವು ಅವರಿಗೆ ಒಳ್ಳೆಯ ತರಬೇತಿಯನ್ನು ಕೊಟ್ಟರೆ ಅವರ ಆಯುಧಗಳಿಗೆ ಉಪಯುಕ್ತವಾಗುವ ಹೆಚ್ಚಿನ ಉಪಕರಣಗಳನ್ನು ಕೊಟ್ಟರೆ; ಒಂದು ಟೀಮಿನಂತೆ ಒಂದಾಗಿ ಕೆಲಸ ಮಾಡಲು ಬಿಟ್ಟರೆ; ಪ್ರತಿಯೊಂದು ಟೀಮಿಗೆ NCO ಮತ್ತು ಅವರ ಬಗ್ಗೆ ಹಾಗೂ ಅವರ ಕುಟುಂಬಗಳ ಬಗ್ಗೆ ಪೋಷಣೆ ಮಾಡುವ ಅಧಿಕಾರ ನಾಯಕರನ್ನು ಕೊಟ್ಟರೆ; ಅಮೇರಿಕದ ಜನರ ಪರವಾಗಿ ಅವರು ಯುದ್ಧ ಮಾಡುತ್ತಿರುವೆವೆಂದು ಯೋಚಿಸಿದರೆ, ಮತ್ತು ಅವರು ತಮ್ಮಲ್ಲಿ ಅಮೇರಿಕದ ಜನರು ನಂಬುವರೆಂದು ನಂಬಿದರೆ ಆಗ ಈ ಜನರು ನಿಮಗಾಗಿ ಏನನ್ನಾದರೂ ಮಾಡಬಲ್ಲರು.”[2]

ಜನರಲ್ ಪೊವೆಲ್‌ನ ಉಲ್ಲೇಖದಲ್ಲಿ ಕೆಲವು ಪದಗಳನ್ನು ನಾವು ಬದಲಾಯಿಸಿದರೆ, ಅದು ಕ್ರೈಸ್ತ ಪರಿಸ್ಥಿತಿಗೆ ಚೆನ್ನಾಗಿ ಹೊಂದಿಕೊಳ್ಳುವುದು: ಸಭೆಯನ್ನು ನಡಿಸುವಂಥವರು ತಾವು ಗುಣಮಟ್ಟದ ಜನರನ್ನು ನಡಿಸುತ್ತಿದ್ದೇವೆಂದು ತಿಳಿದು ಕೊಂಡರೆ, ಸಾಧ್ಯವಾದ ಅತ್ಯುತ್ತಮ ತರಬೇತಿಯನ್ನು ಒದಗಿಸಿಕೊಟ್ಟರೆ, ಸೇವೆಗಾಗಿ ಅಗತ್ಯವಾಗಿರುವ ಉಪಕರಣಗಳನ್ನು ಒದಗಿಸಿಕೊಟ್ಟರೆ, ಸದಸ್ಯರಿಗಾಗಿ ಮತ್ತು ಅವರ ಕುಟುಂಬಗಳಿಗಾಗಿ ಚಿಂತನೆಯನ್ನು ತೋರಿಸಿದರೆ, ಮತ್ತು ತಾವು ಯಾವುದಕ್ಕಾಗಿ ಕಾರ್ಯಮಾಡುತ್ತಿರುವರೋ ಅದರಲ್ಲಿ ನಂಬಿಕೆಯಿಡಲು ಕ್ರೈಸ್ತರನ್ನು ನಡಿಸಿದರೆ - ಆಗ ಕ್ರಿಸ್ತನ ನಿಮಿತ್ತವಾಗಿ ಅವರು ಕೇಳಲ್ಪಡುವದೆಲ್ಲವನ್ನೂ ಸಭೆಯು ಮಾಡುವುದು.

---

ಟಿಪ್ಪಣಿಗಳು

[1]“ಹಿರಿಯರು ಹೇಗೆ ನಡಿಸುವರು” ಎಂಬ ಮೊದಲಿನ ಪಾಠದಲ್ಲಿ ಹೇಳಲ್ಪಟ್ಟಿದ್ದು ಸೇವಕ ನಾಯಕನಾಗಿರುವುದು ಅಂದರೇನು ಎಂಬುದನ್ನು ತಿಳಿದು ಕೊಳ್ಳಲು ನಮಗೆ ಸಹಾಯ ಮಾಡುತ್ತದೆ.

[2]“Volunteer Forces Strengthen U.S.,” *The Tennessean*, Feb. 5, 1991, 7A.